**ದಿನಾಂಕ: 17-06-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**<u>ಪಾಟೀಸವಾಲು: 1, 4 & 5 ನೇ ಪ್ರತಿವಾದಿಗಳ ಪರ ಶ್ರೀ.ವಿ.ಎಸ್.ಪಿ. ವಕೀಲರಿಂದ</u>:-**

ನಾವು ದಾಮಾಜಿ, ಶಿವಾಜಿ, ಮನೋಹರ ಮತ್ತು ಶಂಕರ ಅಂತಾ 4 ಜನ ಸಹೋದರರು ಮತ್ತು ಸೋಮಾಬಾಯಿ, ಮಮತಾಬಾಯಿ ಮತ್ತು ಶಾಂತಾಬಾಯಿ ಅಂತಾ 3 ಜನ ಸಹೋದರಿಯರು ಇರುತ್ತಾರೆ. ಸದರಿ ದಾವೆಯನ್ನು ನನ್ನ ಸಹೋದರಿಯರ ಹೆಸರುಗಳನ್ನು ಸೇರಿಸಿರುತ್ತೇವೆ. ನಮಗೆ 4 ಎಕರೆ 6 ಗುಂಟೆ ಜಮೀನು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ, ಅದರ ಸರ್ವೇ ನಂ.48/ಬಿ ಇರುತ್ತದೆ. ಇದನ್ನು ಹೊರತು ಪಡಿಸಿ ಬೇರೆ ಆಸ್ತಿ ಇರುವುದಿಲ್ಲ. ಸದರಿ ನಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಮೇ-1987 ರಲ್ಲಿ ವಿಭಾಗ ಆಗಿರುತ್ತದೆ. ಆದರೆ ನಿಖರವಾದ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. ಹಂಚಿಕೆ ಪತ್ರ ಒಂದೇ ಇರುತ್ತದೆ.

1 ನೇ ಪ್ರತಿವಾದಿಯು ಶಾಲೆಯನ್ನು ಕಲಿತಿರುವುದಿಲ್ಲ. ನಾನು ಮತ್ತು 2 & 3 ನೇ ಪ್ರತಿವಾದಿಯವರು ನೌಕರಿ ಮಾಡುತ್ತಿದ್ದೇವು ಎಂದರೆ ಸರಿ. ಸದರಿ ವಿಭಾಗದಲ್ಲಿ ನನ್ನ ಪಾಲಿಗೆ 1 ಎಕರೆ ಜಮೀನು ಬಂದಿರುತ್ತದೆ. ಬೇರೆ ಸರ್ವೆ ನಂಬರಲ್ಲಿ ನನ್ನ ಪಾಲಿಗೆ ಜಮೀನು ಬಂದಿರುವುದಿಲ್ಲ. ಅದೇ ರೀತಿ ಪ್ರತಿವಾದಿ ನಂ.1 ರಿಂದ 3 ರವರಿಗೂ ಸಹಿತ ತಲಾ 1 ಎಕರೆ ಜಮೀನು ಪಾಲಿಗೆ ಬಂದಿರುತ್ತದೆ. ದಾವಾ ಜಮೀನನ್ನು ಹಾಗೂ ಉಳಿದ ಜಮೀನು ಸೇರಿ ಒಟ್ಟು 4 ಎಕರೆ 6 ಗುಂಟೆ ಜಮೀನನ್ನು ನಾನು & ಪ್ರತಿವಾದಿ ನಂ.1 ರಿಂದ 3 ರವರು ಸೇರಿ ಖರೀದಿ ಮಾಡಿರುತ್ತೇವೆ. ಸದರಿ ಜಮೀನನ್ನು ರಾಮಣ್ಣ ತಂದೆ ಭೀಮಣ್ಣ ರವರ ಕಡೆಯಿಂದ ಖರೀದಿಸಿರುತ್ತೇವೆ.

ಸದರಿ ಜಮೀನನ್ನು ಖರೀದಿಸುವ ಸಮಯದಲ್ಲಿ ನಾವು 4 ಜನ ಸೇರಿ ರಾಮಣ್ಣ ಇವರ ಕಡೆಗೆ ಹೋಗಿದ್ದೇವು. ಸದರಿ ಖರೀದಿಯ ಮುಂಚೆ ನಮ್ಮ ಭಾಷೆಯಲ್ಲಿ ಒಪ್ಪಂದ ಪತ್ರವನ್ನು ಮಾಡಿಕೊಂಡಿರುತ್ತೇವೆ. ಸದರಿ ಖರೀದಿ ಕರಾರು ಪತ್ರದಲ್ಲಿ

ಎಷ್ಟು ಹಣವನ್ನು ಮುಂಗಡವಾಗಿ ಕೊಡಲಾಗಿರುತ್ತದೆ ಮತ್ತು ಎಷ್ಟು ಹಣ ಖರೀದಿ ಕರಾರು ಪತ್ರ ಕಾಲಕ್ಕೆ ಮುಂಗಡವಾಗಿ ರೂ.6,000/- ಹಣವನ್ನು ಕೊಟ್ಟಿದ್ದೇವು. ಸದರಿ ಖರೀದಿ ಕರಾರು ಪತ್ರಕ್ಕೆ ನಾವು 4 ಜನ ಸಹಿ ಮಾಡಿರುತ್ತೇವೆ. ಅದೇ ರೀತಿ ಖರೀದಿ ಕರಾರು ಪತ್ರ ಬರೆಯು ಸಂದರ್ಭದಲ್ಲಿ ಹಾಜರಿದ್ದ ನರಸಿಂಗ ತಂದೆ ತುಕಾರಾಮ, ಶಿವಾಜಿ ತಂದೆ ಭೀಮಸಿ, ತುಕಾರಾಮ ತಂದೆ ಭೀಮಸಿ ರವರು ಸಹಿ ಮಾಡಿರುತ್ತಾರೆ. ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸದರಿ ಕರಾರು ಪತ್ರವನ್ನು 1987 ರಲ್ಲಿ ಮಾಡಿರುತ್ತೇವೆ. ಆದರೆ ಅದರ ನಿಖರವಾದ ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲ.

ಅದೇ ರೀತಿ ಖರೀದಿ ಪತ್ರವು 1987 ರಲ್ಲಿ ಆಗಿರುತ್ತದೆ. ಸದರಿ ಜಮೀನನ್ನು ರೂ.60,000/- ಕ್ಕೆ ಖರೀದಿಸಿರುತ್ತೇವೆ. ಸದರಿ ಖರೀದಿ ಪತ್ರಕ್ಕೆ ನಾವು 4 ಜನ ಸಹೋದರರು ಸೇರಿ ಮಾಡಿರುತ್ತೇವೆ. ಅದೇ ರೀತಿ ಖರೀದಿ ಪತ್ರ ಬರೆಯು ಸಂದರ್ಭದಲ್ಲಿ ಹಾಜರಿದ್ದ ತುಕಾರಾಮ, ರಾಮಚಂದ್ರ ಮತ್ತು ಭೀಮಸಿ ರವರು ಸಹಿ ಮಾಡಿರುತ್ತಾರೆ. ನಾವು ಯಾರ ಕಡೆಯಿಂದಲೂ ಸಾಲ ಪಡೆದಿರುವುದಿಲ್ಲ. ನಾವು 4 ಜನ ಸಹೋದರರು ಹಣವನ್ನು ಹೊಂದಿಸಿ ಸದರಿ ರಾಮಣ್ಣರವರಿಗೆ ನೀಡಿರುತ್ತೇವೆ. ಸದರಿ 4 ಎಕರೆ 6 ಗುಂಟೆ ಜಮೀನನ್ನು ನಾವು 4 ಜನ ಸೇರಿ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ವಿಭಾಗವಾದ ನಂತರ 1 ನೇ ಪ್ರತಿವಾದಿಯು ಸದರಿ 4 ಎಕರೆ 6 ಗುಂಟೆಯು ಸಹ ಒಬ್ಬನೆ ಖರೀದಿಸಿರುತ್ತಾನೆ ಎಂದರೆ ಸಾಕ್ಷಿಯು ನಾವು ನೌಕರಿ ಇರುವುದರಿಂದ ನಾವು 4 ಜನ ಸೇರಿ ಹಣವನ್ನು ನೀಡಿ ಪ್ರತಿವಾದಿ ನಂ.1 ರವರ ಹೆಸರಿನಲ್ಲಿ ಸದರಿ ಜಮೀನನ್ನು ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ಜಮೀನನ್ನು 1 ನೇ ಪ್ರತಿವಾದಿ ತನ್ನ ಹಾಗೂ ತನ್ನ ಮಕ್ಕಳ ಕೆಲಸದಿಂದ ಗಳಿಸಿದ ಹಣದಿಂದ ಸದರಿ ಜಮೀನು ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿಯು ಖರೀದಿಸಿದ ಸದರಿ 4 ಎಕರೆ 6 ಗುಂಟೆ ಜಮೀನಿನಲ್ಲಿ ನಮ್ಮದು

ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಶಾಲೆಯನ್ನು ಕಲಿತಿರುವುದಿಲ್ಲ, ನಾವು 3 ಜನ ಸೇರಿ ಒಂದು ಬಿಳಿ ಹಾಳೆಯ ಮೇಲೆ 1 ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡು ಸುಳ್ಳು ಹಂಚಿಕೆ ಪತ್ರ ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಜಮೀನು ಸುಳ್ಳು ಹೆಸರು ದಾಖಲು ಆಗಿರುತ್ತದೆ ಎಂದು ನಾನು ಯಾವಾಗಲೂ ಪ್ರಶ್ನಿಸಿರುವುದಿಲ್ಲ ಎಂದರೆ ಈಗ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯು ದಾವಾ ಜಮೀನನ್ನು ತನ್ನ ಮಕ್ಕಳಲ್ಲಿ ಹಂಚಿಕೆ ಪತ್ರ ಮಾಡಿಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ಅದನ್ನು ತಪ್ಪಾಗಿ ಮಾಡಿಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಅನಕ್ಷರಸ್ಥರು ಇದ್ದು ಆತನಿಗೆ ಕಿರುಕುಳ ಕೊಡಲು ಮತ್ತು ಆತನ ಆಸ್ತಿಯನ್ನು ಕಬಳಿಸಲು ನಾನು ಹಾಗೂ ಪ್ರತಿವಾದಿ ನಂ.2 & 3 ರವರು ಸೇರಿ ಆತನ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**(2 & 3 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**